CJ and JMFC: Sringeri OS.No.62/2017
PW1: N.S.Gayithri

**ಸಾಕ್ಷಿಗೆ ದಿನಾಂಕಃ 24.04.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 6 ರವರ ಪರಃ ಶ್ರೀ. ಹೆಚ್ ಆರ್ ಯು ವಕೀಲರಿಂದ ಃ**

1. ನನ್ನ ತಂದೆ ಶ್ರೀನಿವಾಸ್ ಭಟ್ 1974 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಆ ನಂತರ ನನ್ನ ತಾಯಿ ಶಾಂತಲಕ್ಷ್ಮಮ್ಮ ಮತ್ತು ನನ್ನ ಸಹೋದರಿಯರು ಒಟ್ಟಿಗೆ ವಾಸವಿದ್ದೆವು ಎಂದರೆ ಸರಿ. ನಾನು ಜೆ ಸಿ ಬಿ ಎಂ ಕಾಲೇಜಿನಲ್ಲಿ ಬಿ ಎ ಪದವಿ ಪಡೆದಿರುತ್ತೇನೆ. 5 ನೇ ಪ್ರತಿವಾದಿ ವೆಂಕಟೇಶ್ ಭಟ್, 6 ನೇ ಪ್ರತಿವಾದಿ ನಾಗರಾಜ್ ಮತ್ತು 9 ನೇ ಪ್ರತಿವಾದಿಯ ಪತಿ ಕುಮಾರಸ್ವಾಮಿ 3 ಜನ ಸಹೋದರರು ಎಂದರೆ ಸರಿ. 1974 ನೇ ಇಸವಿಯಲ್ಲಿ ನನ್ನ ತಂದೆ ತೀರಿಕೊಂಡ ನಂತರ 1980 ನೇ ಇಸವಿಯಲ್ಲಿ 5, 6 ಮತ್ತು 9 ನೇ ಪ್ರತಿವಾದಿ ಹಾಗೂ ನನ್ನ ತಾಯಿ ಶಾಂತಲಕ್ಷ್ಮಮ್ಮ ರವರು ನೊಂದಾಯಿತ ವಿಭಾಗಪತ್ರದ ಮೂಲಕ ದಾವಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಆ ಸಮಯದಲ್ಲಿ ಮನೆಯಲ್ಲಿ ಇಲ್ಲದಿರುವ ಕಾರಣ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯ ನನಗೆ ಗೊತ್ತಿಲ್ಲ ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು 2017 ಸದರಿ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿದಾಗ ಸದರಿ ವಿಷಯ ನನಗೆ ತಿಳಿದು ಬಂದಿರುತ್ತದೆ.

2. 1980 ನೇ ಇಸವಿಯಲ್ಲಿ ನಾನು ಪ್ರೌಢವಸ್ಥೆಯಲ್ಲಿದ್ದು, ಸದರಿ ವಿಷಯಗಳೆಲ್ಲಾ ನನಗೆ ತಿಳಿಸಿಯೇ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೊಂದಾಯಿತ ವಿಭಾಗಪತ್ರದ ಪ್ರಕಾರ ನನ್ನ ತಾಯಿ ಶಾಂತಲಕ್ಷ್ಮಮ್ಮ ರವರಿಗೆ ಸುಂಕದಮಕ್ಕಿ ಗ್ರಾಮದ ಸ.ನಂಃ 72 ಪಿ ರಲ್ಲಿ 3 ಎಕರೆ 2 ಗುಂಟೆ ಹಾಗೂ ಅದೇ ಗ್ರಾಮದ ಸರ್ವೆ ನಂ 58 ರಲ್ಲಿ 1 ಎಕರೆ 4 ಗುಂಟೆ ಆಸ್ತಿ ಅವರ ಹಿಸ್ಸೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಸದರಿ ವಿಭಾಗ ಪತ್ರದ ಪ್ರಕಾರ 6 ನೇ ಪ್ರತಿವಾದಿಯವರಿಗೆ ಬಂದ ಆಸ್ತಿಗಳಿಗಿಂತ ಎರಡು ಪಟ್ಟು ಹೆಚ್ಚಿನ ವಿಸ್ತೀರ್ಣ ದ ಆಸ್ತಿ ನನ್ನ ತಾಯಿ ಶಾಂತಲಕ್ಷ್ಮಮ್ಮ ರವರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ವಿಭಾಗಪತ್ರದ ಬಗ್ಗೆ ನನಗೆ 2017 ರಲ್ಲಿ ಮೊದಲ ಬಾರಿಗೆ ತಿಳಿದು ಬಂದಿರುತ್ತದೆ ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. 2017 ರಲ್ಲಿ ನಾನು ದಾಖಲೆಗಳನ್ನು ಪರಿಶೀಲಿಸಿದಾಗ ಸದರಿ ವಿಭಾಗಪತ್ರದಡಿ ನನ್ನ

ತಾಯಿಗೆ ಎಷ್ಟೆಲ್ಲಾ ಆಸ್ತಿಗಳು ಬಂದಿವೆ ಎಂದು ನಾನು ನೋಡಿ ಪರಿಶೀಲಿಸಿ ತಿಳಿದುಕೊಂಡಿರುತ್ತೇನೆ. ವಿಭಾಗಪತ್ರವಾದ ನಂತರ ನನ್ನ ತಾಯಿ ಸದರಿ ವಿಭಾಗ ಪತ್ರದಡಿ ಅವರಿಗೆ ಬಂದ ಆಸ್ತಿಗಳ ಬಗ್ಗೆ ಅವರು ಯಾವುದೇ ವಿಲೇವಾರಿ ಮಾಡದೇ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಬಂದಿರುವ ಮಾಹಿತಿ ಪ್ರಕಾರ ನನ್ನ ತಾಯಿ ಸದರಿ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ವಿಲೇವಾರಿಗಳನ್ನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.ಸದರಿ ವಿಭಾಗಪತ್ರದಡಿ ನನ್ನ ತಾಯಿಗೆ ಬಂದ ಆಸ್ತಿಗಳು ಈಗ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿರುತ್ತದೆ ಎಂದರೆ ಸರಿ. 6 ನೇ ಪ್ರತಿವಾದಿಗೆ ವಿಭಾಗಪತ್ರದಡಿ ಅವರಿಗೆ ಕಾನೂನು ರೀತಿ ದಕ್ಕುವಂತಹ ಆಸ್ತಿಗಳಷ್ಟೆ ಬಂದಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಪಿ-2 ವಿಭಾಗಪತ್ರದಡಿ 6 ನೇ ಪ್ರತಿವಾದಿಗೆ ಬಂದ ಆಸ್ತಿಗಳಲ್ಲಿ ನನಗೆ ಭಾಗ ಕೇಳಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ಕೇವಲ ನನ್ನ ತಾಯಿ ಶಾಂತಲಕ್ಷ್ಮಮ್ಮ ರವರಿಗೆ ಬಂದ ಆಸ್ತಿಗಳಲ್ಲಿ ಮಾತ್ರ ಭಾಗ ಕೇಳಲು ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈ ದಾವೆಯಲ್ಲಿ ತೋರಿಸಿರುವ ಎಲ್ಲಾ ಆಸ್ತಿಗಳಲ್ಲೂ ಹಕ್ಕು ಹಾಗೂ ಭಾಗ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ನನ್ನ ತಾಯಿ ಆಸ್ತಿಗಳಲ್ಲಿ ಮಾತ್ರ ಹಕ್ಕು ಇರುತ್ತದೆ ಎಂದು ಗೊತ್ತಿದ್ದರೂ ಸಹ 6 ನೇ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಅವರಿಗೆ ಬಂದ ಆಸ್ತಿಗಳಲ್ಲಿ ಸಹ ಭಾಗ ಕೇಳಿ ಈ ದಾವೆ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

3. ನನಗೂ ಮತ್ತು 6 ನೇ ಪ್ರತಿವಾದಿಗೂ ನಡುವೆ ಒಡನಾಟ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ಮಧ್ಯೆ ಯಾವುದೇ ಗಲಾಟೆಗಳು ಇರುವುದಿಲ್ಲ, ಆದರೆ ಈ ದಾವೆ ಹೂಡಿದ ನಂತರ ಭಿನ್ನಾಭಿಪ್ರಾಯ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಪಿ-2 ವಿಭಾಗಪತ್ರದಡಿ ಪ್ರತಿವಾದಿ 6 ರವರಿಗೆ ಯಾವ ಯಾವ ಆಸ್ತಿಗಳು ಹೋಗಿರುತ್ತದೆ ಎಂದು ನನಗೆ 2017 ರ ಬಳಿಕ ತಿಳಿದು ಬಂದಿರುತ್ತದೆ. ವಿಭಾಗಪತ್ರವಾದ ನಂತರ 6 ನೇ ಪ್ರತಿವಾದಿ ಹಾಗೂ ಅವರ ಕುಟುಂಬದವರು ಬೇರೆ ಹೋಗಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು 1980 ರಲ್ಲಿ ಬೇರೆ ಹೋಗಿ ವಾಸವಾಗಿರುವ ವಿಷಯ ನನಗೆ ಗೊತ್ತಿರುತ್ತದೆ ಆದರೆ ಸದರಿ ವಿಷಯಕ್ಕೂ ವಿಭಾಗಪತ್ರಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ.

4. 1980 ರಲ್ಲಿ ನಿಪಿ-2 ವಿಭಾಗಪತ್ರವಾದ ನಂತರ ಅವರ ಆಸ್ತಿಗಳನ್ನು ಪಡೆದು 6 ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ಪ್ರತ್ಯೇಕವಾಗಿ ವಾಸವಾಗಿರುವ ಬಗ್ಗೆ ನನಗೆ ಮಾಹಿತಿ ಇತ್ತು, ಆದರೆ ವಿಭಾಗಪತ್ರದ ಪ್ರಕಾರ ಆಸ್ತಿಗಳನ್ನು ಪ್ರತ್ಯೇಕವಾಗಿ ಹೊಂದಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯಗಳೆಲ್ಲಾ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ 6 ನೇ ಪ್ರತಿವಾದಿಯವರ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ನನಗೆ ಹಕ್ಕು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

5. ನಿಪಿ-2 ವಿಭಾಗಪತ್ರದಡಿ ನನ್ನ ತಾಯಿಗೆ ಬಂದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳಲ್ಲಿ ಹಕ್ಕು ಕೇಳುವ ಅಧಿಕಾರ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಪ್ರತಿವಾದಿ 12 ಮತ್ತು 13 ರವರ ಪರಃ ಶ್ರೀ. ಜಿ ಎಂ ವಿ ವಕೀಲರು ಮತ್ತು ಪ್ರತಿವಾದಿ 14 ಮತ್ತು 15 ರವರ ಪರಃ ಶ್ರೀ. ಕೆ ಆರ್ ಎಸ್ ವಕೀಲರಿಂದ ಃ**

ಸಮಯ ಕೋರಿದ್ದು, ಸಮಯಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು.

**(ದಿನಾಂಕಃ 24.04.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**